

# ಭರಮಪ್ಪ ನಾಯಕನ ಕೆರೆ

ಕಡು ಬೇಸಿಗೆಯ ಅದೊಂದು ದಿನ ಸಂಜೆಯ ಇಳಿಹೊತ್ತಿನಲ್ಲಿ ಪುಟ್ಟ ಆಟವಾಡಲು ಮನೆಯಿಂದ ಹೊರಗೆ ಹೊರಟಿದ್ದ. ಮನೆಯಿಂದ ಸ್ವಲ್ಪ ದೂರದಲ್ಲಿದ್ದ ಒಣಗಿದ ಕೆರೆಯ ದಂಡೆಯ ಮೇಲೆ ವೃದ್ಧ ವ್ಯಕ್ತಿ ಒಬ್ಬರು ಕುಳಿತಿದ್ದು ಕಾಣಿಸಿತು. ಆ ಮಹಾನುಭಾವರು ತನ್ನ ಊರಿನವರಲ್ಲ ಎನಿಸಿತು ಅವನಿಗೆ. ಯಾರಿರಬಹುದು? ಇಲ್ಲಿ ಏಕೆ ಕುಳಿತಿರಬಹುದು ಎನ್ನುವ ಜಿಜ್ಞಾಸೆ ಅವನ ಮನದಲ್ಲಿ ಹುಟ್ಟಿಕೊಂಡಿತು. ಅವರಿಂದಲೇ ತಿಳಿದುಕೊಳ್ಳೋಣ ಎಂದು ಅವರ ಸಮೀಪಕ್ಕೆ ಪುಟ್ಟ ಹೋದ.

ತಲೆಯಲ್ಲಿ ಮುಂಡಾಸು ಕಟ್ಟಿಕೊಂಡ ಆ ವ್ಯಕ್ತಿ ತುಂಬಾ ವಯಸ್ಸಾದವರಂತೆ ಕಾಣುತ್ತಿದ್ದರು. ಅವರ ಮನಸ್ಸಿನಲ್ಲಿ ದುಗುಡ ತುಂಬಿಕೊಂಡಂತೆ ಭಾಸವಾಗುತ್ತಿತ್ತು. ಅವರ ಮನದ ಇಂಗಿತವನ್ನು ತಿಳಿಯುವ ಕಾತರ ಹೆಚ್ಚಾಯಿತು ಆ ಪುಟ್ಟನಿಗೆ. ‘ಅಜ್ಜಾ, ನೀವು ಯಾವ ಊರಿನವರು? ಇಲ್ಲೇಕೆ ಒಂಟಿಯಾಗಿ ಕುಳಿತು ಕೊಂಡಿರುವಿರಿ?’ ಎಂದು ಪ್ರಶ್ನಿಸಿದ.

‘ಮಗು, ನಾನು ಇದೇ ಊರಿನವ. ಈ ಕೆರೆಯನ್ನು ಕಟ್ಟಿಸಿದ್ದು ನಾನೇ. ನನ್ನ ಹೆಸರು ಭರಮಪ್ಪ ನಾಯಕ’ ಎಂದರು. ಆ ಕೆರೆಗೆ ಭರಮಪ್ಪ ನಾಯಕನ ಕೆರೆ ಎಂದು ಊರಿನ ಜನರು ಕರೆಯುತ್ತಿದ್ದುದನ್ನು ಕೇಳಿದ್ದ ಪುಟ್ಟನಿಗೆ ಭರಮಪ್ಪ ನಾಯಕರೇ ಎದುರು ಕುಳಿತಿದ್ದಾರೆಂದು ಕೇಳಿ ಆಶ್ಚರ್ಯವಾಯಿತು. ಭರಮಪ್ಪ ನಾಯಕ ಎನ್ನುವ ವ್ಯಕ್ತಿ ಇನ್ನೂ ಬದುಕಿದ್ದಾರೆಯೇ? ಊರಿನಲ್ಲಿ ಯಾರೂ ಇದುವರೆಗೆ ಭರಮಪ್ಪ ನಾಯಕನನ್ನು ಕಂಡಿದ್ದಾಗಿ ಹೇಳಿದ್ದಿಲ್ಲ. ಹಾಗಾದರೆ ಇವರು ಎಲ್ಲಿಂದ ಬಂದಿರಬಹುದು ಎಂಬೆಲ್ಲ ಪ್ರಶ್ನೆಗಳು ಆತನ ಮನದಲ್ಲಿ ಮೂಡಿದವು.

ಪುಟ್ಟನ ಮನದ ಭಾವನೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಆ ಹಿರಿಯ ವ್ಯಕ್ತಿ ತಾನು ಬಹಳ ಸಮಯದ ನಂತರ ಇಲ್ಲಿಗೆ ಬಂದಿರುವುದಾಗಿಯೂ, ಈ ಕೆರೆ ಹೇಗಿದೆ ಎಂದು ನೋಡಲು ಬಂದಿರುವುದಾಗಿಯೂ ಹೇಳಿದರು. ತುಂಬಾ ವರ್ಷಗಳ ಹಿಂದೆ ಬೇಸಿಗೆಯಲ್ಲಿ ನೀರಿನ ಅಭಾವವನ್ನು ಗಮನಿಸಿ, ಜನರಿಗೂ–ಜಾನುವಾರುಗಳಿಗೂ ಮತ್ತು ವನ್ಯ ಪಶು ಪಕ್ಷಿಗಳಿಗೂ ಅನುಕೂಲವಾಗಲೆಂದು ಕಟ್ಟಿಸಿದ ಕೆರೆ ಹೂಳು ತುಂಬಿಕೊಂಡು ಒಣಗಿರುವುದನ್ನು ಕಂಡು ಬಹಳ ಬೇಸರಗೊಂಡಿದ್ದರು. ತಾನು ಕೆರೆ ಕಟ್ಟಿಸಿದ ಗತ ಕಾಲದ ದಿನಗಳನ್ನು ಪುಟ್ಟನೊಂದಿಗೆ ಅವರು ಹಂಚಿಕೊಂಡರು.

ಹಿಂದೆ ಮಳೆಗಾಲದಲ್ಲಿ ತೋಡುಗಳ ಮೂಲಕ ನೀರು ಹರಿದು ಬಂದು ಕೆರೆಯಲ್ಲಿ ಸಂಗ್ರಹವಾಗುತ್ತಿತ್ತು. ಬೇಸಿಗೆಯಲ್ಲಿ ಆ ನೀರು ಆಸುಪಾಸಿನ ಬಾವಿಗಳ ಜಲಸ್ತರ ಮೇಲ್ಮಟ್ಟದಲ್ಲಿರಲು ಸಹಾಯಕವಾಗಿತ್ತು. ಬಾಯಾರಿ ಬಂದ ದನ ಕರುಗಳಿಗೆ ಕುಡಿಯಲು ಇಲ್ಲಿ ನೀರು ಸಿಗುತ್ತಿತ್ತು. ಕಪ್ಪು ಕೋಳಿಗಳು,